ದಿನ ದರ್ಶಿಕೆ

ಚೈತ್ರ ಮಾಸ, ನಕ್ಷತ್ರ ಪುನರ್ವಸು, ಶುಕ್ಲ ಪಕ್ಷ, ಅಷ್ಟಮಿ, ಯೋಗ ಧೃತಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ವಸಂತ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಲವಂಗ ಎಣ್ಣೆಯಲ್ಲಿ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿದೆ. ಇದರಿಂದಾಗಿ ಲವಂಗವನ್ನು ಸೇವಿಸುವುದರಿಂದ ಬಾಯಿಯ ಹುಣ್ಣು ಕಡಿಮೆಯಾಗುತ್ತದೆ. ಬಹುಬೇಗ ಪರಿಹಾರವನ್ನು ಪಡೆಯಲು, ಎಣ್ಣೆಯನ್ನು ನೇರವಾಗಿ ಹುಣ್ಣುಗಳಿಗೆ ಹಚ್ಚಿ. ಸ್ವಲ್ಪ ಸಮಯದ ನಂತರ ಬಾಯಿಯನ್ನು ಬೆಚ್ಚಗಿನ ನೀರಿನಿಂದ ತೊಳೆಯಿರಿ.

ಸೌಂದರ್ಯ ಸೂತ್ರ

ತಲೆಹೊಟ್ಟಿನ ಸಮಸ್ಯೆ ಇದ್ದಲ್ಲಿ, ದಾಳಿಂಬೆ ಸಿಪ್ಪೆಯ ಪುಡಿಯನ್ನು ತೆಂಗಿನೆಣ್ಣೆ ಅಥವಾ ಕೂದಲಿಗೆ ಬಳಸುವ ಯಾವುದೇ ಎಣ್ಣೆಯ ಜತೆ ಮಿಕ್ಸ್ ಮಾಡಿ ತಲೆಯ ಬುಡಕ್ಕೆ ಹಚ್ಚಿ 2 ಗಂಟೆ ಬಿಡಿ. ಬಳಿಕ ಸೌಮ್ಯವಾದ ಶ್ಯಾಂಪೂ ಹಚ್ಚಿ ತಲೆತೊಳೆಯಿರಿ. ಹೀಗೆ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ.

ಯಕ್ಷಗಾನದ ಮಾಯಾ ಲೋಕ

ಕಾರಂತರು ಯಕ್ಷಗಾನ ನೃತ್ಯದಲ್ಲಿ ಯಾವತ್ತೂ ಸಾಂಪ್ರದಾಯಿಕ ತರಬೇತಿ ಪಡೆದಿರಲಿಲ್ಲ. ಅದರಲ್ಲೂ ಅವರು ಇಡೀ ದೇಹ ಹಾಗೂ ಮುಖದ ಭಾವನೆಗಳನ್ನು ಬಳಸುವ ಸ್ವತಂತ್ರ ಅಭಿವ್ಯಕ್ತಿಯ ವಿಧಾನವನ್ನೇ ಅನುಸರಿಸುತ್ತಿದ್ದರು. ಅದನ್ನು ಸಾಂಪ್ರದಾಯಿಕ ಯಕ್ಷಗಾನದ ನಟನೆಯ ವಿಧಾನಕ್ಕೆ ಬೆರೆಸಿ ತಮ್ಮದೇ ಆದ 'ಯಕ್ಷರಂಗ' ಎಂಬ ಕಲಾಪ್ರಕಾರವನ್ನು ಅಭಿವೃದ್ಧಿಪಡಿಸಿದ್ದರು.



ಚಿತ್ರ 44

ಕಾರಂತರ ಸುಳಿಯಲ್ಲಿ
ಇಂಗ್ಲಿಷ್ ಮೂಲ
ಗ್ರೋಯಿಂಗ್ ಅಪ್ ಕಾರಂತ
ಕೆ. ಉಲ್ಲಾಸ ಕಾರಂತ, ಮಾಲವಿಕಾ ಕಪೂರ್, ಕ್ಷಮಾ ರಾವ್
ಕನ್ನಡಕ್ಕೆ **ವಿಶ್ವೇಶ್ವರ ಭಟ್**

(ಹಿಂದಿನ ಸಂಚಿಕೆಯಿಂದ)

ನನಗಾಗ ಆರು ವರ್ಷವಿರಬೇಕು. ಕೋಟದಲ್ಲಿ ಯಕ್ಷಗಾನ ಪ್ರದರ್ಶನ ಏರ್ಪಾಟಾಗಿತ್ತು. ಪ್ರಸಿದ್ಧ ಯಕ್ಷಗಾನ ಕಲಾವಿದ ಹಾರಾಡಿ ರಾಮ ಗಾಣಿಗ ಅವರ ಪಾತ್ರವಿತ್ತು. ನಾನು ಮೊದಲ ಬಾರಿ ಇಡೀ ರಾತ್ರಿ ಕುಳಿತು ಯಕ್ಷಗಾನವೊಂದನ್ನು ನೋಡಿದ್ದೇ ಆಗ. ಬಹುಶಃ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿರುವ ಆ ಅದ್ಭುತ ಜಾನಪದ ಕಲೆಯ ಮೊದಲು ನೆನಪು ಕೂಡ ಅದೇ ಆಗಿದೆ. ಹಾರಾಡಿ ರಾಮ ಎತ್ತರದ, ಕಟ್ಟುಮಸ್ತಾದ ವ್ಯಕ್ತಿ. ಅವರು ಪಾತ್ರ ಮಾಡಿದ ಅರ್ಜುನನಂತೆಯೇ ನಿಜ ಜೀವನದಲ್ಲೂ ಕಾಣಿಸುತ್ತಿದ್ದರು. ಹೊಳ್ಳರ ಉಪ್ಪರಿಗೆ ಮನೆಯ ಹಿಂಭಾಗದಲ್ಲಿ ಯಕ್ಷಗಾನ ಆಯೋಜಿಸಲಾಗಿತ್ತು. ರಾತ್ರಿಯಿಡೀ ಯಕ್ಷಗಾನ ನೋಡಿ, ಮರುದಿನ ಮುಂಜಾನೆಯ ನಸುಕಿನಲ್ಲೇ ಪುಷ್ಕಳ ತಿಂಡಿ ಸಮಾರಾಧನೆ. ಬಾಳೆ ಎಲೆಯಲ್ಲಿ ಹುಳಿ ಅವಲಕ್ಕಿ ಹಾಗೂ ನಂತರ ರುಚಿಕರ ಬಾಳೆಹಣ್ಣು ತಿಂದಿದ್ದು ಮನಸ್ಸಿನಲ್ಲಿ ಸದಾ ಹಚ್ಚಹಸಿರು.

ಅದು ಯಕ್ಷಗಾನದ ಜತೆಗಿನ ನನ್ನ ಮೊದಲ ಅನುಭವವಾದ್ದರಿಂದ ನೆನಪಿನ ಕೋಶದಲ್ಲಿ ಯಾವತ್ತೂ ಬೆಚ್ಚಗೆ ಕುಳಿತಿರುತ್ತದೆ. ನಂತರ ಬೆಳೆದು ನಾನೇ ಸ್ವತಃ ಕಲಾವಿದೆಯೂ ಆದ ಮೇಲೆ ಆಗಾಗ ಮೆಲುಕು ಹಾಕುವ ಸುಂದರ ನೆನಪು ಕೂಡ ಆಗಿ ಇನ್ನಷ್ಟು ಬಣ್ಣ ಪಡೆದಿದೆ. ತಾತನಿಗೆ ಅದ್ಭುತವಾದ ಸೌಂದರ್ಯ ಪ್ರಜ್ಞೆಯಿತ್ತು. ಅವರಲ್ಲಿ ನಾನು ಅತಿ ಹೆಚ್ಚು ಇಷ್ಟಪಡುತ್ತಿದ್ದ ಗುಣವದು. ನನ್ನ ಪ್ರಕಾರ ಭಾರತದ ಅತ್ಯಂತ ಪ್ರತಿಭಾವಂತ ಕಲಾವಿದರಾದ ರುಕ್ಮಿಣಿ ದೇವಿ ಅರುಂಡೇಲ್ ಹಾಗೂ ನನ್ನ ಗುರು ಕೇಳು ಚರಣ್ ಮಹಾಪಾತ್ರ ಅವರ ಕಲಾವಂತಿಕೆಯ ಜತೆ ತಾತನನ್ನು ಹೋಲಿಸಬಹುದು. ಆ ಮೂವರಲ್ಲೂ ಇದ್ದ ಒಂದು ಸಾಮಾನ್ಯ ಗುಣ ವೆಂದರೆ ಬಲವಾದ

ಯಕ್ಷಗಾನ ನೃತ್ಯದಲ್ಲಿ ತಲ್ಲೀನರಾದ ಶಿವರಾಮ ಕಾರಂತರು.

ಸೌಂದರ್ಯ ಪ್ರಜ್ಞೆ. ಅದರ ಜೊತೆಗೆ ಅವರಿಗೆ ಸೌಂದರ್ಯದ ಬಗ್ಗೆ ಸಾಕಷ್ಟು ಜ್ಞಾನವೂ, ತಮ್ಮ ಸುತ್ತಮುತ್ತ ಇರುವ ಎಲ್ಲ ವಸ್ತುಗಳ ಸೌಂದರ್ಯದ ಬಗ್ಗೆ ವಿಶಿಷ್ಟವಾದ ಕಲ್ಪನಾಶಕ್ತಿಯೂ ಇತ್ತು.

ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಹೊಸತನದ ಆವಿಷ್ಕಾರ: ಆ ಮೂವರು ಕಲಾವಿದರ ವೃತ್ತಿ ಜೀವನದ ಹಾದಿ ಸಂಪೂರ್ಣ ಬೇರೆಯೇ ಆಗಿತ್ತು. ಆದರೆ ಸೃಜನ ಶೀಲತೆಯ ವಿಷಯಕ್ಕೆ ಬಂದರೆ ಅದು ಮೂವರಲ್ಲೂ ತುಂಬಿ ತುಳುಕುತ್ತಿತ್ತು. ಸಾಂಪ್ರದಾಯಿಕ ಚೌಕಟ್ಟಿನಲ್ಲೇ ಸದಾ ಹೊಸಹೊಸತನ್ನು ಆಷ್ಕರಿಸುತ್ತಾ ಹೋಗುವ ಗುಣ ಅವರದು. ಸಂಪ್ರದಾಯವನ್ನು ಕುರುಡಾಗಿ ಪಾಲನೆ ಮಾಡುವುದಕ್ಕೆ ತಾತ ವಿರೋಧಿಯಾಗಿದ್ದರು. ಅವರಿಗೆ ಅಮೆರಿಕದ ಪ್ರಸಿದ್ಧ ನೃತ್ಯಗಾತಿ ಇಸಾಡೋರಾ ಡಂಕನ್ ಅಚ್ಚುಮೆಚ್ಚು. ಆಕೆ ತನ್ನದೇ ಆದ ಸ್ವತಂತ್ರ ಶೈಲಿಯ ನೃತ್ಯಪ್ರಕಾರವನ್ನು ಕಂಡುಡಿದಿದ್ದಳು. ಅವಳ ಜೀವನ ಚರಿತ್ರೆಯನ್ನು ಬಹಳ ಆಸಕ್ತಿಯಿಂದ ಓದಿದ್ದ ತಾತ, ಅವಳ ಬಗ್ಗೆ ಇದ್ದ ಸಿನಿಮಾವನ್ನು ಕೂಡ ನೋಡಿದ್ದರು. ಅವಳಂತೆಯೇ ತಾನು ಕೂಡ ಸ್ವತಂತ್ರವಾದ ನೃತ್ಯ ಪ್ರಕಾರವನ್ನು ಅಭಿವೃದ್ಧಿಪಡಿಸಬೇಕೆಂಬುದು ತಾತನ ಕನಸಾಗಿತ್ತು. ಬೆಸೆಂಟ್ ಸ್ಕೂಲ್‌ನಲ್ಲಿ ಅಮ್ಮ ಹಾಗೂ ಇನ್ನಿತರ ವಿದ್ಯಾರ್ಥಿಗಳಿಗೆ ತಾತ ಕಲಿಸಿದ್ದ ನೃತ್ಯ ಹೆಚ್ಚುಕ್ಕಮ್ಮಿ ತಾತನದೇ ಆವಿಷ್ಕಾರವಾಗಿತ್ತು. ನೃತ್ಯದಲ್ಲಿ ಯಾವುದೇ ಸಂಕೀರ್ಣ ಶಿಸ್ತಿಗೆ ನಾವು ಬಂಧಿಯಾಗುವುದು ತಾತನಿಗೆ ಇಷ್ಟವಿರಲಿಲ್ಲ. ಹಾಗೆ ಮಾಡಿದರೆ ಅದು ಅನುಕರಣೆಯಾಗುತ್ತದೆಯೇ ಹೊರತು ಕಲೆ ಯಾಗುವುದಿಲ್ಲ ಎಂದು ಅವರು ನಂಬಿದ್ದರು. ನೃತ್ಯ ಮಾಡುವಾಗ ಭಾವನೆಗಳು ನಮ್ಮ ಹೃದಯದಿಂದ ಉಕ್ಕಬೇಕು ಎಂದು ಹೇಳುತ್ತಿದ್ದರು.

ಸಿಟ್ಟು ಬಂದಾಗ ನಾವು ಎರಡೂ ಕೈಗಳನ್ನು ಎತ್ತಿ ಆಳುವುದಿಲ್ಲ. ದೊಡ್ಡವರು ಮುಕ್ತವಾಗಿ, ತಮ್ಮ ಸಿಟ್ಟು, ಬೇಸರ ಅಥವಾ ಸಂತೋಷವನ್ನು ಸಾರ್ವಜನಿಕವಾಗಿ ತೋರಗೊಡುವುದಿಲ್ಲ. ಇದು ತಾತ ತಮ್ಮ ಉಪನ್ಯಾಸಗಳಲ್ಲಿ ಹೇಳುತ್ತಿದ್ದ ಕುತೂಹಲಕರ ಸಂಗತಿಯಾಗಿತ್ತು. ತಮ್ಮ ನೃತ್ಯ-ನಾಟಕಗಳಲ್ಲೂ ತಾತ ಇದೇ ಮೂಲ ಭೂತ ಕಲ್ಪನೆಯನ್ನು ಅಳವಡಿಸಿಕೊಂಡಿದ್ದರು. ಅವರು ನಡೆಸುತ್ತಿದ್ದ ತಾಲೀಮುಗಳನ್ನು ನಾನು ಸಾಕಷ್ಟು ನೋಡಿದ್ದೇನೆ. ಭಾವನೆಗಳನ್ನು ವ್ಯಕ್ತಗೊಳಿಸಲು ಅವರು ಮಗುವಿನಂತೆ ಇಡೀ ಶರೀರ ಹಾಗೂ ಮುಖ ವನ್ನು ಬಳಸುತ್ತಿದ್ದರು. ಆದರೆ ಅದಕ್ಕೊಂದು ಕಲಾವಂತಿಕೆ ಹಾಗೂ ಲಯವನ್ನು ಅಳವಡಿಸಿಕೊಳ್ಳುತ್ತಿದ್ದರು. ಆ ಭಾವಾಭಿವ್ಯಕ್ತಿಗಳು ಅವರಲ್ಲಿ ಸಹಜವಾಗಿ ಒಡ ಮೂಡುತ್ತಿದ್ದವು. ಒಂದಾದ ಮೇಲೊಂದರಂತೆ ಅವರು ಭಿನ್ನ ಭಾವನೆಗಳನ್ನು ನಟಿಸಬಲ್ಲವರಾಗಿದ್ದರು. ಮರು ದಿನದ ಪ್ರದರ್ಶನದಲ್ಲಿ ಸಂಪೂರ್ಣ ಬೇರೆಯದೇ ಆದ ಇನ್ನೊಂದು ನಟನೆಯನ್ನು ಪ್ರದರ್ಶಿಸುತ್ತಿದ್ದರು. ಆದರೆ ಶಾಸ್ತ್ರೀಯ ನೃತ್ಯದಲ್ಲಿ ಹೀಗಿರುವುದಿಲ್ಲ, ಅದಕ್ಕೊಂದು ಸ್ಪಷ್ಟವಾದ ಚೌಕಟ್ಟಿರುತ್ತದೆ. ಆ ಚೌಕಟ್ಟಿನಲ್ಲೇ ಎಲ್ಲ ಅಭಿನಯಗಳೂ ಪುನರಾವರ್ತನೆಯಾಗುತ್ತಿರುತ್ತವೆ.

ಒಬ್ಬ ಶಾಸ್ತ್ರೀಯ ನೃತ್ಯಗಾತಿಯಾಗಿ ಈ ಶಾಸ್ತ್ರೀಯ ಚೌಕಟ್ಟಿನಲ್ಲೇ ಸೃಜನಶೀಲ ಪ್ರಯೋಗಗಳಿಗೆ ಸಾಕಷ್ಟು ಅವಕಾಶಗಳಿವೆ ಎಂದು ನನಗೆ ಅನ್ನಿಸುತ್ತದೆ. ಆದರೆ ತಾತ ಯಾವುದೇ ನೃತ್ಯ ಪ್ರಕಾರದಲ್ಲೂ ಶಾಸ್ತ್ರೀಯ ಶಿಕ್ಷಣ ಪಡೆದಿರಲಿಲ್ಲ, ಬಹಳ ಜನರು ಶಿವರಾಮ ಕಾರಂತರು ಯಕ್ಷಗಾನದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದರು ಎಂದು ಕೊಂಡಿದ್ದಾರೆ. ಆದರೆ ತಾತ ಯಕ್ಷಗಾನ ನೃತ್ಯದಲ್ಲಿ ಯಾವತ್ತೂ ಸಾಂಪ್ರದಾಯಿಕ ತರಬೇತಿ ಪಡೆದಿರಲಿಲ್ಲ. ಅದರಲ್ಲೂ ಅವರು ಇಡೀ ದೇಹ ಹಾಗೂ ಮುಖದ ಭಾವನೆಗಳನ್ನು ಬಳಸುವ ಸ್ವತಂತ್ರ ಅಭಿವ್ಯಕ್ತಿಯ ವಿಧಾನವನ್ನೇ ಅನುಸರಿಸುತ್ತಿ ದ್ದರು. ಅದನ್ನು ಸಾಂಪ್ರದಾಯಿಕ ಯಕ್ಷಗಾನದ ನಟನೆಯ ವಿಧಾನಕ್ಕೆ ಬೆರೆಸಿ ತಮ್ಮದೇ ಆದ 'ಯಕ್ಷರಂಗ' ಎಂಬ ಕಲಾಪ್ರಕಾರವನ್ನು ಅಭಿವೃದ್ಧಿಪಡಿಸಿದ್ದರು.

ದೂರದೃಷ್ಟಿಯುಳ್ಳ ಸೃಜನಶೀಲ ಸ್ವತಂತ್ರ ಕಲಾವಿದ: ಈ ಪ್ರಯೋಗವನ್ನು ಅನೇಕ ಸಂಪ್ರದಾಯವಾದಿ ಯಕ್ಷಗಾನ ಕಲಾವಿದರು ಟೀಕಿಸುತ್ತಿದ್ದರು. ತಾತನ ಯಕ್ಷರಂಗದಲ್ಲಿ ಯಕ್ಷಗಾನದ ಪ್ರಮುಖ ಭಾಗವಾಗಿರುವ ಮಾತೇ ಇರುತ್ತಿರಲಿಲ್ಲ. ಆದರೆ ಒಟ್ಟಾರೆಯಾಗಿ ನೋಡಿದರೆ ಸಾಂಪ್ರದಾಯಿಕ ಯಕ್ಷಗಾನದ ಸೌಂದರ್ಯದ ಜತೆಗೆ ಅವರ ಯಕ್ಷರಂಗದ ವಿಧಾನ ಚೆನ್ನಾಗಿಯೇ ಬೆರೆಯುತ್ತಿತ್ತು. ಅದರಲ್ಲಿ ಬ್ಯಾಲೆ ನೃತ್ಯದ ಜತೆಗೆ ತಾತ ಆದಕ್ಕೂ ಮೊದಲು ಮಾಡಿದ್ದ ಪ್ರಯೋಗಗಳು ಕೂಡ ಸೇರಿಕೊಂಡಿದ್ದವು. ದೂರದೃಷ್ಟಿಯುಳ್ಳ ಸೃಜನಶೀಲ ಸ್ವತಂತ್ರ ಕಲಾವಿದ ನೊಬ್ಬ ಸಂಪ್ರದಾಯದಿಂದಲೇ ಪಡೆದ ಸಂಗತಿಗಳನ್ನು ಬಳಸಿ ಹೊಸ ಸುಂದರ ಕಲಾಪ್ರಕಾರವೊಂದನ್ನು ಸೃಷ್ಟಿಸುವುದೆಂದರೆ ಹೀಗೆಯೇ ಅಲ್ಲವೇ?

ಸಾಮಾನ್ಯವಾಗಿ ವೃತ್ತಿಪರ ಯಕ್ಷಗಾನ ಕಲಾವಿದರು ಬಡ ಹಾಗೂ ಅನಕ್ಷರಸ್ಥ ಕುಟುಂಬದಿಂದ ಬಂದಿರು ತ್ತಿದ್ದರು. ಅವರು ಯಕ್ಷಗಾನದ ವೇಷಭೂಷಣಗಳು ಹಾಗೂ ಪರಿಕರಗಳನ್ನು ಸ್ವತಃ ತಾವೇ ಹೊತ್ತುಕೊಂಡು ತಿರುಗಾಡಬೇಕಿತ್ತು. ಒಂದೂರಿನಿಂದ ಇನ್ನೊಂದೂರಿಗೆ ಅವರ ಮೇಳ ಹೋಗಬೇಕೆಂದರೆ ಎಲ್ಲಾ ಸಾಮಾನುಗಳನ್ನು ಬೆತ್ತದ ಬಾಕ್ಸುಗಳಲ್ಲಿ ತುಂಬಿಕೊಂಡು ಕಲಾವಿದರೇ ಹೊತ್ತು ಹೋಗುತ್ತಿದ್ದರು. ನಂತರ ಅದೇ ದಿನ ರಾತ್ರಿ ಅವರು ಯಕ್ಷಗಾನವನ್ನೂ ಕುಣಿಯಬೇಕಿತ್ತು. ಹಗಲಿಡೀ ವೇಷ ಭೂಷಣಗಳನ್ನು ಹೊತ್ತುಕೊಂಡು ನಡೆದು, ರಾತ್ರಿ ಪೂರ್ತಿ ಯಕ್ಷಗಾನ ಕುಣಿಯಬೇಕು, ಹಾಡಬೇಕು ಹಾಗೂ ನಟಿಸಬೇಕು ಎಂದರೆ ಹುಡು ಗಾಟವೇ? ಅದರ ಜತೆಗೆ ಸಮಾಜದ ಮೇಲ್ವರ್ಗದವರು ಹಾಗೂ ಶ್ರೀಮಂತರು ತಮ್ಮನ್ನು ಗೌರವದಿಂದ ನೋಡುವುದಿಲ್ಲ ಎಂಬ ಕೊರಗು ಬೇರೆ ಇತ್ತು. ಆದರೆ ತಾತ ಅವರನ್ನೆಲ್ಲ ಬಹಳ ಗೌರವದಿಂದ ನೋಡುತ್ತಿದ್ದರು. ಅವರಿಗೆ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವಕಾಶಗಳನ್ನೂ ಮನ್ನಣೆಯನ್ನೂ ತಂದು ಕೊಟ್ಟರು. ಹೀಗಾಗಿ ಅವರಿಗೆ ತಾತನ ಮೇಲೆ ತುಂಬಾ ಪ್ರೀತಿ ಹಾಗೂ ಗೌರವವಿತ್ತು. ತಾತನ ಬಗ್ಗೆ ಯಾರು ಏನೇ ಹೇಳಿದರೂ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅಥವಾ ತಾತನೇ ತರಬೇತಿ ಕಾರ್ಯಾಗಾರಗಳಲ್ಲಿ ಅವರಿಗೆ ಎಷ್ಟು ಬೈದರೂ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ.

(ಮುಂದುವರಿಯುವುದು)

ದಿನ ಭವಿಷ್ಯ

ಮೇಷ ಯಾವುದೇ ಸಂದರ್ಭದಲ್ಲಿ ಸಿಟ್ಟಾದರೂ, ಇತರರ ಬಗ್ಗೆ ನಿಂದನೆಯ ಮಾತನ್ನಾಡದಿರಿ. ಅಮೂಲ್ಯವಾದ ವಸ್ತುವಿನ ಬಗ್ಗೆ ಎಚ್ಚರಿಕೆ ವಹಿಸಿ.

ವೃಷಭ ಈ ದಿನ ಪುರುಷರಿಗೆ ತುಂಬಾ ಒಳ್ಳೆಯದು. ದೀರ್ಘಕಾಲದ ಯೋಜನೆಗಳಿಗೆ ಹೂಡಿಕೆ ಮಾಡಲು ಇಂದು ಉತ್ತಮ ಸಮಯ.

ಮಿಥುನ ಕಚೇರಿ ಅಥವಾ ಮನೆಯಲ್ಲಿ ಸ್ವಲ್ಪ ಒತ್ತಡವನ್ನು ಅನುಭವಿಸುವಿರಿ. ನಿಮ್ಮ ಸುತ್ತಲಿನ ಜನರು ಕೋಪಗೊಳ್ಳುವ ಸಾಧ್ಯತೆಗಳಿವೆ.

ಕಟಕ ಕೆಲಸದ ಬಗ್ಗೆ ಗಮನ ನೀಡಿ. ಜತೆಗೆ ಕೆಲಸದ ಒತ್ತಡದ ನಡುವೆ ವಿಶ್ರಾಂತಿಗಾಗಿ ಸಮಯ ಮೀಸಲಿಡಿ. ಸಂಗಾತಿಯಿಂದ ಬೆಂಬಲ ಇದೆ.

ಸಿಂಹ ಉತ್ತಮ ಯೋಜನೆ ರೂಪಿಸಿಕೊಂಡು, ಆತ್ಮವಿಶ್ವಾಸದಿಂದ ಮುನ್ನಡೆದರೆ ಶೀಘ್ರದಲ್ಲೇ ಯಶಸ್ಸು ನಿಮ್ಮದಾಗುವುದು.

ಕನ್ಯಾ ಈ ದಿನ ಅದೃಷ್ಟ ನಿಮ್ಮದಾಗಲಿದೆ. ಯಾವುದೇ ಸವಾಲಿನ ಪರಿಸ್ಥಿತಿಯಲ್ಲಿ ಭಯಪಡಬೇಡಿ. ಅವುಗಳನ್ನು ಸುಲಭವಾಗಿ ಎದುರಿಸಲು ಸಾಧ್ಯವಾಗುತ್ತದೆ.

ತುಲಾ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಕೆಲಸ ಯಾರದ್ದಾದರೂ ನೆರವಿನಿಂದ ಇಂದು ಪೂರ್ಣಗೊಳ್ಳಬಹುದು. ಆರೋಗ್ಯ ಚೆನ್ನಾಗಿರುತ್ತದೆ.

ವೃಶ್ಚಿಕ ಸಾರ್ವಜನಿಕ ಸಂಬಂಧಗಳಲ್ಲಿ ನಿಮ್ಮ ಗುರುತು ಬಲವಾಗಿರುವುದು ಮುಖ್ಯ. ನೆರೆಹೊರೆಯವರೊಂದಿಗೆ ಯಾವುದೇ ವಿವಾದವನ್ನು ತಪ್ಪಿಸಿ.

ಧನು ದೂರದ ಪ್ರಯಾಣವನ್ನು ತಪ್ಪಿಸಿದರೆ ಉತ್ತಮ. ಕಚೇರಿಯಲ್ಲಿನ ಸಿಬ್ಬಂದಿಗಳ ಸಹಕಾರದಿಂದ ಸ್ಥಗಿತಗೊಂಡ ಚಟುವಟಿಕೆಗಳನ್ನು ಪುನರಾರಂಭಿಸಬಹುದು.

ಮಕರ ಕೆಲವು ಪ್ರಮುಖ ಕೆಲಸಗಳನ್ನು ಪೂರ್ಣಗೊಳಿಸಲು ಇಂದು ಅನುಕೂಲಕರ ಸಮಯ. ನಿಮ್ಮ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ

ಕುಂಭ ವ್ಯಾಪಾರ ಚಟುವಟಿಕೆ ಸಾಮಾನ್ಯ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಪ್ರಸ್ತುತ ಸಮಯವನ್ನು ತಾಳ್ಮೆಯಿಂದ ಕಳೆಯಬೇಕು.

ಮೀನ ಮಾಧ್ಯಮ ಅಥವಾ ಆನ್ಲೈನ್ ಚಟುವಟಿಕೆಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಸುಗಮವಾಗಿ ನಡೆಯುತ್ತವೆ. ಸಂಗಾತಿ ನಡುವೆ ಉತ್ತಮ ಸಂಬಂಧ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1889- ಹಾಸ್ಯನಟ, ನಿರ್ಮಾಪಕ, ಬರಹಗಾರ, ನಿರ್ದೇಶಕ ಚಾರ್ಲಿ ಚಾಪ್ಲಿನ್ ಜನನ
- 1853 - ಮುಂಬೈ - ಥಾಣೆ ನಡುವೆ ಭಾರತದಲ್ಲಿ ಮೊದಲ ರೈಲು ಆರಂಭ
- 2008 - ಲಂಡನ್‌ನಲ್ಲಿ ರಾಷ್ಟ್ರಪಿತ ಗಾಂಧೀಜಿ ಪ್ರತಿಮೆ ಅನಾವರಣ.

ಚಿತ್ರಸ್ಫೂರ್ತಿ

ದಿನಕ್ಕೊಂದು ಮಾಹಿತಿ

ಯುಂಬುಲಗಂಗ್ ಗೊಂಪಾ

ಬೌದ್ಧರ ಪ್ರಮುಖ ದೇಗುಲ ಯುಂಬುಲಗಂಗ್ ಗೊಂಪಾ ಟಿಬೆಟ್‌ನ ಅತ್ಯಂತ ಹಳೆಯ ವಾಸ್ತುಶಿಲ್ಪ ಮತ್ತು ಧಾರ್ಮಿಕ ಸ್ಮಾರಕಗಳಲ್ಲಿ ಒಂದಾಗಿದೆ. ಟಿಬೆಟ್‌ನ ಮೊದಲ ದೊರೆ ಗೋಸ್ಕರವೇ 2 ಸಾವಿರ ವರ್ಷ ಗಳ ಹಿಂದೆ ಯಾರ್ಲುಂಗ್ ನದಿಯ ಪೂರ್ವ ತೀರ ದಲ್ಲಿ ಇದನ್ನು ನಿರ್ಮಿಸಲಾಗಿದೆ. ಮಠದ ನಾಲ್ಕು ಹಂತದ ಕಟ್ಟಡಗಳು ಮುಖ್ಯ ದೇವಾಲಯ ದೊಂದಿಗೆ ಕೊನೆ ಗೊಳ್ಳುತ್ತವೆ. ಇದನ್ನು ಚೌಕಾಕಾರದ ಬೌದ್ಧ ಗುಮ್ಮಟಗಳಿಂದ ಅಲಂಕರಿಸಲಾಗಿದೆ. ಟಿಬೆಟ್‌ನ ಇತಿಹಾಸವನ್ನು ಸಾರುವ ಚಿತ್ರಗಳು ಇಲ್ಲಿವೆ.

ಪ ದ ಬಂ ಧ



ಎಡದಿಂದ ಬಲಕ್ಕೆ
1. ಇವನು ತಪ್ಪು ಹೊರಿಸಲ್ಪಟ್ಟವನು (4)
3. ಸತ್ತವರನ್ನು ಬದುಕಿಸುವುದೆಂದು ನಂಬಲಾಗಿರುವ ಮೂಲಿಕೆ (4)
4. ಸಿದ್ಧಾಂತ ಮಂಡಿಸುವಾಗ ಆದ ರಂಪ (3)
5. ಇದೊಂದು ಬಗೆಯ ಚರ್ಮವಾದ್ಯ (3)
7. ಬೇರು ಸಹಿತವಾದ ಎಂದರ್ಥ (3)
11. ದೊಡ್ಡದಾದ ಕೊಳ (4)
12. ಚಿನ್ನದ ವ್ಯಾಪಾರಿ (4)
13. ಹೆದರಬೇಡವೆಂದು ನೀಡಿದ ರಕ್ಷಣೆ (3)
15. ಮಲಗುವ ಮೆತ್ತನೆಯ ವಸ್ತು (3)
16. ಭೂಮಿಯನ್ನು ಮುಟ್ಟಿದಂತೆ ಕಾಣುವ ಆಕಾಶದ ಭಾಗ (3)
17. ನೀರಿನ ಅಲೆ ಉಂಟುಮಾಡುತ್ತ ಹರಿಯುವ ನದಿ (4)
18. ಖಾಲಿ ಕೈಯನ್ನು ಹೀಗೆನ್ನುವರು (4)

ಮೇಲಿನಿಂದ ಕೆಳಕ್ಕೆ
2. ಕರಾಟೆ ಕಲಿಯುವಾಗಿದೇನು ಆಕ್ಷೇಪಣೆ (3)
3. ಖುಷಿಗೆ ಮತ್ತೊಂದು ಹೆಸರು (3)
6. ಪ್ರೀತಿಗೆ ಪಾತ್ರನಾದವನು ಈತ (5)
8. ಪ್ರದೇಶವೊಂದರಲ್ಲಿ ಮೊದಲಿನಿಂದಲೂ ಬೀಡು ಬಿಟ್ಟಿರುವ ಜನಾಂಗ (5)
9. ಮಣದ ಮಧ್ಯೆ ಕಂಡಿತು ಸ್ಮಶಾನ (3)
10. ಪ್ರೀತಿಯಿದ್ದರೂ ಉಂಟಾದ ವೈಮನಸ್ಯ (3)
14. ಇಂದ್ರಜಾಲದ ವಿದ್ಯೆ (3)
15. ಇರುವಿಕೆಯನ್ನು ಹೀಗೆ ಹೇಳುವರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಎರವಾಗು 3. ಅಂಗಾರಕ 5. ರಿವಾಜು 7. ಲುವಾಹಅ 9. ಪ್ರಸರಣ 10. ರಭಸ 11. ಉಪವಾಸ 12. ವಜ್ರಕಾಯ 15. ದಾಖಲೆ 17. ಮಹಾಪೂರ 18. ಮತದಾರ

ಮೇಲಿನಿಂದ ಕೆಳಕ್ಕೆ: 1. ಎರವಲು 2. ಗುರಿ 3. ಅಂಜು 4. ಕಡಿವಾಣ 6. ವಾದ್ಯ 8. ಅರಸ 9. ಪ್ರಸವ 11. ಉಪಕ್ರಮ 13. ಯಜಮಾನ 14. ಶಂಖ 15. ದಾರ 16. ಲೆಮ

● ಸಿ. ರವಿಶಂಕರ ಶಾಸ್ತ್ರಿ ದಂಬೆ

#